

## ಗೊರಸಿನ ಚಿನ್ನ

ಕೋಲಾರದ ನೆಲದಲ್ಲಿ ಚಿನ್ನ ಇರುವುದನ್ನು ಮೊದಲು ಗಮನಿಸಿದ್ದು ಟಿಪ್ಪು ಸುಲ್ತಾನ್ ಎಂಬ ಮಾತು ಇದೆ. ಕುದುರೆ ಸವಾರಿ ಮಾಡುವ ಸಂದರ್ಭದಲ್ಲಿ ಇದು ಅವರ ಕಣ್ಣಿಗೆ ಬಿದ್ದಿದೆ. ಮುಂದೆ ಹೋಗುತ್ತಿದ್ದ ಸಹಚರನ ಕುದುರೆಯ ಗೊರಸು ಫಳಫಳ ಎಂದು ಹೊಳೆದಿದ್ದನ್ನು ಕಂಡು ಟಿಪ್ಪು, ಪರಿವಾರದ ಎಲ್ಲರನ್ನೂ ನಿಲ್ಲಿಸಿದರಂತೆ. ಚಿನ್ನ ಇರುವುದು ಹೀಗೆ ಗೊತ್ತಾಯಿತಂತೆ. ನಂತರ ಟಿಪ್ಪು, ಫ್ರೆಂಚ್ ಭೂವಿಜ್ಞಾನಿಗಳ ನೆರವಿನಿಂದ ಇಲ್ಲಿ ಚಿನ್ನ ಹೊರತೆಗೆದರು ಎಂಬ ವಿವರಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ.

ಇಲ್ಲಿ ಚಿನ್ನದ ಗಣಿಗಾರಿಕೆ ವ್ಯವಸ್ಥಿತವಾಗಿ ಶುರುವಾಗಿದ್ದು 1880ರಲ್ಲಾದರೂ ಚಿನ್ನದ ಲಭ್ಯತೆ ಕುರಿತ ಉಲ್ಲೇಖಗಳು ಶತಮಾನಗಳಷ್ಟು ಹಿಂದೆಯೇ ಕಾಣಿಸುತ್ತವೆ. ಚೋಳರು ಮತ್ತು ವಿಜಯನಗರ ಅರಸರ ಕಾಲದಲ್ಲಿಯೇ ಕೋಲಾರದ ಈ ನೆಲ ಚಿನ್ನದ ಕಾರಣಕ್ಕೆ ಮಹತ್ವ ಪಡೆದಿತ್ತು ಎಂದು ಹೇಳಲಾಗಿದೆ.

ಮೂಲಕ ಬೆಂಗಳೂರು ತಲುಪುತ್ತವೆ. ಅಂದರೆ, ಬೆಂಗಳೂರು – ಬಂಗಾರಪೇಟೆ – ಕೆಜಿಎಫ್ ನಡುವಣ ಸಂಪರ್ಕ ಎಷ್ಟು ಚೆನ್ನಾಗಿದೆ ಎಂಬುದು ಗೊತ್ತಾಗುತ್ತದೆ. ರಸ್ತೆ ಸಂಪರ್ಕವೂ ಉತ್ತಮವಾಗಿಯೇ ಇದೆ. ಬೆಂಗಳೂರಿನ ಒಂದು ತುದಿಯಿಂದ ಇನ್ನೊಂದು ತುದಿಯನ್ನು ತಲುಪಲು ಅಗತ್ಯವಿರುವುದಕ್ಕಿಂತ ಕಡಿಮೆ ಅವಧಿಯಲ್ಲಿ ಬೆಂಗಳೂರಿನಿಂದ ಬಂಗಾರಪೇಟೆ ತಲುಪಬಹುದು. ಅಲ್ಲಿಂದ ಕೆಜಿಎಫ್ 14 ಕಿ.ಮೀ. ದೂರದಲ್ಲಿ ಇದೆ – ಕೇವಲ 20 ನಿಮಿಷಗಳ ಪ್ರಯಾಣ. ಅಂದರೆ, ಬೆಂಗಳೂರಿನ ಸುಂದರ ಉಪನಗರವಾಗಿ ಬೆಳೆಸುವ ಸಾಧ್ಯತೆಗಳು ಇರುವ ನಗರ ಕೆಜಿಎಫ್. ಅದನ್ನು ಉಪನಗರವಾಗಿ ಬೆಳೆಸಿದ್ದಿದ್ದರೆ ಬೆಂಗಳೂರಿನ ಮೇಲಿನ ಒತ್ತಡದಲ್ಲಿ ತುಸುವಾದರೂ ಕಡಿಮೆ ಆಗಿರುತ್ತಿತ್ತು. ಆದರೆ, ಇಂದಿನ ಪರಿಸ್ಥಿತಿಯಲ್ಲಿ ಕೆಜಿಎಫ್ ನಗರ ಬೆಂಗಳೂರನ್ನೇ ನೆಚ್ಚಿಕೊಂಡಿರುವ ಕಾರಣ, ಬೆಂಗಳೂರಿನ ಮೇಲಿನ ಒತ್ತಡ ಇನ್ನಷ್ಟು ಹೆಚ್ಚಾಗಿದೆ. ಕೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪ ಹುಡುಕುವ ನಮ್ಮ ಆಡಳಿತಗಾರರ 'ಬುದ್ಧಿವಂತಿಕೆ' ಅಥವಾ ದಡ್ಡತನಕ್ಕೆ ಕೆಜಿಎಫ್ ಜನರ ಬದುಕು ಜೀವಂತ ಉದಾಹರಣೆಯಾಗಿ ನಿಂತಿದೆ.

ಕೆಜಿಎಫ್ ನಗರದಲ್ಲಿ ಒಮ್ಮೆ ಸುತ್ತಾಡಿದರೆ, ಚಿನ್ನದ ಅದಿರನ್ನು ಭೂಗರ್ಭದಿಂದ ಮೇಲಕ್ಕೆ ತರಲು ಬಳಸುತ್ತಿದ್ದ ಯಂತ್ರಗಳ ಜಾಲ, ಸಲಕರಣೆಗಳು ಕಣ್ಣಿಗೆ ರಾಚುತ್ತವೆ. ಆದರೆ, ಅವೆಲ್ಲ ತುಕ್ಕು ಹಿಡಿದು ಅಸ್ಥಿಪಂಜರದಂತೆ ಆಗಿವೆ. ಚಿನ್ನದ ಅದಿರನ್ನು ಅಧಿಕೃತವಾಗಿ ಮೇಲೆತ್ತಿ ಮಾರಾಟ ಮಾಡಿ ಬಂದ ಹಣ ಸರ್ಕಾರದ ಬೊಕ್ಕಸ ತುಂಬಿಸಿತು. ದೇಶಕ್ಕೊಂದು ಆರ್ಥಿಕ ಶಕ್ತಿಯೂ ಆಗಿತ್ತು. ಆದರೆ ಗಣಿ ಮುಚ್ಚಿದ ಮೇಲೆ ಅದನ್ನು ನೆಚ್ಚಿಕೊಂಡಿದ್ದ ಮಾನವ ಸಂಪನ್ಮೂಲ ಶಕ್ತಿಹೀನವಾಯಿತು.

ಅದಿರನ್ನು ವರ್ಷಗಳ ಕಾಲ ಸಾಗಿಸಿದ ಯಂತ್ರಗಳ ಅವಶೇಷಗಳನ್ನು ಕದ್ದು ಮಾರಾಟ ಮಾಡಿ, ಜೇಬು ತುಂಬಿಸಿಕೊಂಡವರು ಸಾಕಷ್ಟು ಜನ ಇದ್ದಾರೆ ಎಂಬುದು ಸ್ಥಳೀಯರ ಜೊತೆ ಮಾತಿಗೆ ನಿಂತ ಒಂದೆರಡು ನಿಮಿಷಗಳಲ್ಲಿಯೇ ಗೊತ್ತಾಗುತ್ತದೆ!

'ಕೆಜಿಎಫ್‌ಗಾಗಿಯೇ ಒಬ್ಬರು ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಇದ್ದಾರೆ. ಒಂದೇ ಜಿಲ್ಲೆಗೆ ಇಬ್ಬರು ಎಸ್‌ಪಿ ಎಲ್ಲ ಕಡೆ ಇರುವುದಿಲ್ಲ. ಕೆಜಿಎಫ್‌ಗೆ ವರ್ಗಾವಣೆ ಆದಾಗ, 'ಅಯ್ಯೋ ನಮಗೆ ಕೆಜಿಎಫ್‌ಗೆ ವರ್ಗ ಆಯಿತಲ್ಲಾ' ಎಂದು ಅಳುವವರು, ಇಲ್ಲಿಂದ ಬೇರೆ ಕಡೆ ವರ್ಗ ಆದಾಗ 'ಅಯ್ಯಯ್ಯೋ, ಇಲ್ಲಿಂದ ಹೋಗಬೇಕಲ್ಲಾ' ಎಂದು ಪರಿತಪಿಸುತ್ತಾರೆ. ಎಲ್ಲದಕ್ಕೂ ಇಲ್ಲಿನ ಚಿನ್ನದ ಮಾಯೆ ಕಾರಣ' ಎನ್ನುತ್ತಾರೆ ಸ್ಥಳೀಯರೊಬ್ಬರು. ಪೊಲೀಸರಿಗೆ ಸಂಬಂಧಿಸಿದ ವಿಚಾರವಾದ ಕಾರಣ ಹೆಸರು ಬಹಿರಂಗಪಡಿಸಬೇಡಿ ಎಂಬ ಷರತ್ತು ಬೇರೆ ವಿಧಿಸಿದರು! ಒಂದು ಕಾಲದಲ್ಲಿ ಇಲ್ಲಿ